/ ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ನಂ. 1 ಕಟ್ಟಡಗಳ ಉಪ ವಿಭಾಗ ವಿ. ವಿ ಕೇಂದ್ರ,
ಬೆಂಗಳೂರು ರವರ ಕಾರ್ಯಾಲಯ

ಲೋಕೋಪಯೋಗಿ ಇಲಾಖೆ

ದೂರವಾಣಿ : 080-22863309
e-mail : eebldno.1@gmail.com

ಸಂ:ಸಕಾಇಂ/ನಂ.1 ಕ. ಉ.ವಿ/ಎ.ಇ-1/2023-24 / 2752

ದಿನಾಂಕ: 16.08.2023

To,

M/s. Ravindra Bharathi Global School
Run and Managed By Ravindra Bharathi Educational Society
SY No. 55, khata no 50, K.Narayanappa Garden,
Brindavan Layout, Ashirvad Colony, Horamavu,
Bengaluru, Karnataka – 560043

ಮಾನ್ಯರೇ,

ವಿಷಯ : M/s. Ravindra Bharathi Global School, SY No 55, khata no 50, K.Narayanappa Garden, Brindavan Layout, Ashirvad Colony, Horamavu, Bengaluru, Karnataka – 560043, ರವರ ಶಾಲೆಯ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ :1) : M/s. Ravindra Bharathi Global School, ರವರ
2) ಸರ್ಕಾರದ ಆದೇಶ ಸಂಖ್ಯೆ: ಲೋ.ಇ/59/ಬಿ.ಇ.ಡಿ/2019/ದಿನಾಂಕ: 07.05.2022
3) ಈ ಕಛೇರಿ: ಪತ್ರ ಸಂಖ್ಯೆ: RGS/PWD/Building safety/405, ದಿನಾಂಕ: 03.08.2023
4) ಡಿ.ಡಿ.ಸಲ್ಲಿಸಿದ ದಿನಾಂಕ:17.08.2023

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, M/s. Ravindra Bharathi Global School, SY No 55, khata no 50, K.Narayanappa Garden, Brindavan Layout, Ashirvad Colony, Horamavu, Bengaluru – 560043, ನೆಲ ಮಹಡಿ, 1ನೇ, ಮತ್ತು 2ನೇ, ಮೇಲ್ಮಹಡಿಗೆ ಸಂಬಂಧಿಸಿದಂತೆ ಶಾಲೆಯ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಒದಗಿಸಲು ಅಗತ್ಯವಿರುವುದಾಗಿ ತಿಳಿಸಿ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡಲು ಉಲ್ಲೇಖ (1) ರ ತಮ್ಮ ಪತ್ರದಲ್ಲಿ ಕೋರಲಾಗಿರುತ್ತದೆ. ಹಾಗೂ ಸದರಿ ಕಟ್ಟಡಕ್ಕೆ ಸಂಬಂಧಿಸಿದ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸಲಾಗಿರುತ್ತದೆ.

ಅದರಂತೆ, ಶಾಲೆಯ ಕಟ್ಟಡವನ್ನು ದಿನಾಂಕ: 11.08.2023 ರಂದು ಉಪವಿಭಾಗದ ವತಿಯಿಂದ ಪರಿವೀಕ್ಷಣೆ ನಡೆಸಲಾಗಿರುತ್ತದೆ. ಹಾಗೂ ಉಲ್ಲೇಖ (2) ರ ಸರ್ಕಾರದ ಆದೇಶದನ್ವಯ ನಗರ ಪ್ರದೇಶದಲ್ಲಿನ ಶಾಲೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲು ರೂ. 5,000/- ಗಳ ಮೊತ್ತದ ಡಿ.ಡಿ.ಯನ್ನು The Assistant Executive Engineer, No: 1 Buildings Sub-division, V.V. Centre, Bangalore, ರವರ ಹೆಸರಿನಲ್ಲಿ ಪಡೆದು ಈ ಕಛೇರಿಗೆ ಸಲ್ಲಿಸಿದ ನಂತರ ಕಟ್ಟಡಕ್ಕೆ ಸಂಬಂಧಿಸಿದ ಸುರಕ್ಷತಾ ಪ್ರಮಾಣ ಪತ್ರವನ್ನು ವಿತರಿಸುವ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಎಂದು ಉಲ್ಲೇಖ (3) ರ ಈ ಕಛೇರಿ ಪತ್ರದಲ್ಲಿ ತಿಳಿಸಲಾಗಿದ್ದು, ಉಲ್ಲೇಖ (4)ರಲ್ಲಿ ತಾವುಗಳು ರೂ. 5000/- ಮೊತ್ತದ ಡಿ. ಡಿ. ಸಂಖ್ಯೆ: 05321/ದಿನಾಂಕ: 17-08-2023, ರಂದು ಈ ಕಛೇರಿಗೆ ಸಲ್ಲಿಸಿರುತ್ತೀರಿ.

ಈ ಶಾಲೆಯ ಸಂಕೀಣದಲ್ಲಿ ನೆಲ ಮಹಡಿ, 1ನೇ, ಮತ್ತು 2ನೇ, ಮಹಡಿಯನ್ನು ನಿರ್ಮಿಸಲಾಗಿರುತ್ತದೆ. ನೆಲಮಾಳಿಗೆಯ ವಾಹನಗಳು ನಿಲುಗಡೆ ಮತ್ತು ಉಗ್ರಾಣ ಕೊಠಡಿ, ತರಗತಿ-10 ಸ್ವಾಗತಗಾರರ ಕೊಠಡಿ-01, ಉಗ್ರಾಣ ಕೊಠಡಿ -01, ಶೌಚಾಲಯ-2, ಪ್ರಾಂಶುಪಾಲ ಕೊಠಡಿ -01, ಇರುತ್ತದೆ. 1ನೇ ಮಹಡಿಯಲ್ಲಿ ಸಿಬ್ಬಂದಿ ಕೊಠಡಿ -02, ಸಿ.ಎಂ, -01, ನಿರ್ವಹಣೆ ಕೊಠಡಿ-01, ತರಗತಿ-12, ಶೌಚಾಲಯ-02 ಇರುತ್ತದೆ, 2ನೇ ಮಹಡಿಯಲ್ಲಿ ತರಗತಿ-102, ದಾಖಲೆ ಕೊಠಡಿ -1, ಕಂಪ್ಯೂಟರ್ ಕೊಠಡಿ -01, ಶೌಚಾಲಯ-2 ಇರುತ್ತದೆ, ಗ್ರಂಥಾಲಯ ಕೊಠಡಿ-01, ಶೌಚಾಲಯ -02, Toy Room -01, Care Center 01, Dance room-01 and Music Room-01, ಇರುತ್ತದೆ.

- ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ ಕಟ್ಟಡದ ಕಾಂಕ್ರಿಟ್ ಸದೃಢತೆಯ ಬಗ್ಗೆ ದಿನಾಂಕ:07.08.2023 ರಲ್ಲಿ M/s. Civil-Aid associated Bangalore, Rebound hammer test & Ultra Sonic pulse velocity test ಕೈಗೊಂಡು ವರದಿಯನ್ನು ನೀಡಿರುತ್ತಾರೆ.
- ಅನೆಕ್ಸ್-1 ರಿಂದ 6ನ್ನು ಸಲ್ಲಿಸಲಾಗಿರುತ್ತದೆ.

ತಾವುಗಳು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ, Safety Check report, Physical observation, Investigating studies, Rebound hammer test and Ultra Sonic pulse velocity test M/s Civil aid associated, Bangalore ಕೈಗೊಂಡಿರುತ್ತಾರೆ. ಹಾಗೂ M/s. Civil - Aid Associated, Bangalore ರವರು ಕಟ್ಟಡ, ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ಪ್ರಮಾಣ ಪತ್ರವನ್ನು ನೀಡಿರುತ್ತಾರೆ, ಸದರಿ ವರದಿಗಳನ್ನು ಹಾಗೂ ಕಟ್ಟಡವನ್ನು ಪರಿಶೀಲಿಸಲಾಗಿ ಕಟ್ಟಡದ ಆರ್.ಸಿ.ಸಿ, ಕಂಬ, ತೊಲೆ ಹಾಗೂ ಛಾವಣಿಯಲ್ಲಿ ಯಾವುದೇ ಬಿರುಕುಗಳು ಕಂಡು ಬಂದಿರುವದಿಲ್ಲ. ಕಟ್ಟಡವ Structural Sound Condition ಇರುವುದಾಗಿ ಪರೀಕ್ಷೆ ವರದಿಗಳು ಕಂಡು ಬಂದಿರುವುದರಿಂದ ಹಾಗೂ ಕಟ್ಟಡವು ಮೇಲ್ನೋಟಕ್ಕೆ ಸುರಕ್ಷಿತವಾಗಿರುವುದು ಕಂಡು ಬಂದಿರುತ್ತದೆ. ಈ ಕೆಳಕಂಡ ಷರತ್ತುಗಳನ್ನು ಅನುಸರಿಸಲು ಸೂಚಿಸಲಾಗಿದೆ.

1. ಅಗ್ನಿಶಾಮಕ ಇಲಾಖೆ ಮತ್ತು ಇತರ ಸಂಬಂಧಪಟ್ಟ ಇಲಾಖೆಗಳ ಸಕ್ಷಮ ಪ್ರಾಧಿಕಾರಗಳಿಂದ ಅನುಮತಿ / ಪ್ರಮಾಣ ಪತ್ರವನ್ನು ನಿಯಮಾವಳಿಗಳ ಅನ್ವಯ ನಿಗದಿತ ಸಮಯಗಳಲ್ಲಿ ಪಡೆಯತಕ್ಕದ್ದು.
2. ಕಟ್ಟಡವನ್ನು ಕಾಲಕಾಲಕ್ಕೆ ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನು ಬಳಸಿ ತಜ್ಞರಿಂದ ವ್ಯವಸ್ಥಿತವಾಗಿ ನಿರ್ವಹಣೆ ಮಾಡತಕ್ಕದ್ದು.
3. ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಸುರಕ್ಷತೆಗೆ ಸಕಲ ಆದ್ಯತೆಯನ್ನು ನೀಡಿ ಸೂಕ್ತ ಸುರಕ್ಷತಾ ವ್ಯವಸ್ಥೆಯನ್ನು ಅಳವಡಿಸಿಕೊಳ್ಳತಕ್ಕದ್ದು.
4. ಕಟ್ಟಡದ ಸದೃಢತೆಗೆ ಧಕ್ಕೆಯಾಗುವಂತಹ ಯಾವುದೇ ಇತರ ಕಾಮಗಾರಿಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಕೈಗೊಳ್ಳತಕ್ಕದ್ದಲ್ಲ, ಅನುಮತಿ ಪಡೆಯದೇ ಕೈಗೊಂಡಲ್ಲಿ, ಪ್ರಮಾಣ ಪತ್ರವು ಆ ಕೂಡಲೇ ರದ್ದಾಗುತ್ತದೆ.
5. ಕುಡಿಯುವ ನೀರು ಹಾಗೂ ಶೌಚಾಲಯಗಳಲ್ಲಿ ಸದಾ ಸ್ವಚ್ಛತೆಯನ್ನು ಕಾಪಾಡಿಕೊಳ್ಳತಕ್ಕದ್ದು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಶಾಲಾ, ಸಂಬಂಧಿಸಿದ ನಿಯಮಾವಳಿಯನ್ನು ಕಡ್ಡಾಯವಾಗಿ ಪಾಲಿಸತಕದ್ದು.

ಮೇಲೆ ತಿಳಿಸಲಾಗಿರುವ ಷರತ್ತುಗಳಿಗೊಳಪಟ್ಟು M/s. Ravindra Bharathi Global School, Sy No 55, khata no 50, K. Narayanappa Garden, Brindavan Layout, Ashirvad Colony, Horamavu, Bengaluru, - 560043, ಶಾಲೆಯ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು
ನಂ. 1 ಕಟ್ಟಡಗಳ ಉಪ ವಿಭಾಗ, ಬೆಂಗಳೂರು.

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಬೆಂಗಳೂರು-560001
ಸಂಖ್ಯೆ: 2752
ದಿನಾಂಕ: 18/08/2023
ನಂ.1ನೇ ಕಟ್ಟಡಗಳ ಉಪವಿಭಾಗ

24/02/2025